ಎಂಬಂತಾಗಿದೆ, ಈ ಸಲುವಾಗಿ ಸಂಬಂಧಪಟ್ಟ ಉಪ ವಿಭಾಗಾಧಿಕಾರಿಗಳಿಗೆ ಜಿಲ್ಲಾಧಿಕಾರಿಗಳಿಗೆ ಕಂದಾಯ ಸಚಿವರಿಗೆ ಮುಖ್ಯಮಂತ್ರಿಗಳಿಗೆ ಮಾಡಿದ ಮನವಿಗಳಿಗೂ ಪರಿಹಾರ ದೊರಕುತ್ತಿರಲಿಲ್ಲ. ಅರ್ಜಿಗಳು ಫೈಲ್ ಆಗಿವೆ ಅಷ್ಟೆ. ಮನವಿಗಳೂ ಫೈಲ್ ಆಗುತ್ತಿದೆ. ಹಕ್ಕಿನ ಬೇಡಿಕೆ ಫೈಲ್ ಆಗಿದೆ, ಇದು ಖಂಡಿತ ಆಗಬಾರದು, ಕರ್ನಾಟಕದ ಯಾವುದೇ ನಿಜವಾದ ಒಕ್ಕಲಿಗೆ ಭೂಮಿಯ ಹಕ್ಕು ಸಿಕ್ಕಲ್ಲ, ಮತ್ತು ಧನಿಗೆ ಪರಿಹಾರ ಸಿಕ್ಕಿಲ್ಲ ಎಂದಾಗಬಾರದು. ಈ ವಿಚಾರದಲ್ಲಿ ನ್ಯಾಯ ದೊರಕಿಸಿಕೊಡಲು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ ಪಿ. ಪ್ರಕಾಶ್ (ವಾರ್ತಾ ಸಚಿವರು).—ಮಾನ್ಯ ರೆವಿನ್ಯೂ ಮಂತ್ರಿಗಳ ಪರವಾಗಿ ಈ ಕೆಳಗಿನಂತೆ ಹೇಳಿಕೆ ನೀಡುತ್ತೇನೆ.

ಭೂ ಸುಧಾರಣಾ ಕಾಯಿದೆ ಅನ್ವಯ ಯಾವುದೇ ಗೇಣಿದಾರನಿಗಾಗಲೀ, ಭೂ ಪಾಲೀಕರಿಗಾಗಲೀ ಅನ್ಯಾಯವಾಗಿರುವುದಿಲ್ಲ ಕಾಯ್ದೆಯನ್ವಯ ಗೇಣಿದಾರನೆಂದು ರುಜುವಾತಾದಲ್ಲಿ ಅತನಿಗೆ ಭೂ ಒಡೆತನ ಸಿಗುವುದು. ಅಂತೆಯೇ ಪಾಜಿ ಭೂ ಮಾಲೀಕರಿಗೂ ಪರಿಹಾರ ಧನವನ್ನು ಈಗಾಗಲೇ ಸರ್ಕಾರ ಪಾವತಿ ಮಾಡುತ್ತಿದ್ದು ಹೆಚ್ಚಿನ ಪ್ರಕರಣಗಳಲ್ಲಿ ಪಾವತಿಯಾಗಿರುವುದು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚೆನ್ನಪಟ್ಟಣ ತಾಲ್ಲೂಕಿನ ಮಲ್ಲೂರು ಗ್ರಾಮದ ಸರ್ವೆ ನಂಬರ್ ೧೦೫ ಮತ್ತು ೧೦೬ಕ್ಕೆ ಹಕ್ಕು ಪಡೆಯಲು ಅರ್ಜಿ ಸಲ್ಲಿಸಿದ ಐದು ಮಂದಿ ಒಕ್ಕಲು ಪ್ರಕರಣ ತನಿಖೆ ಆಗದೆ ಚೆನ್ನಪಟ್ಟಣ ಭೂ ನ್ಯಾಯ ಮಂಡಳಿಯಲ್ಲಿ ರಿಜೆಕ್ಟರ ಫೈಲ್ ಆಗಿ ಇನ್ನೂ ನಿರ್ಧಾರವಾಗಿರುವ ಬಗ್ಗೆ ಕೂಲಂಕಷ ತನಿಖೆ ನಡೆಸಿ ಈ ವಿಚಾರದಲ್ಲಿ ಸಂಬಂಧಿಸಿದವರಿಗೆ ನ್ಯಾಯ ಸಿಗಲನುಕೂಲವಾಗುವಂತೆ ಸರ್ಕಾರ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡುವ ದಿಸೆಯಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

೩) ಉಡುಪಿ ಕ್ಷೇತ್ರಕ್ಕೆ ಸರ್ಕಾರೀ ಪ್ರಥಮ ದರ್ಜೆ ಕಾಲೇಜಿಗಾಗಿ ಒತ್ತಾಯ

ಶ್ರೀಮತಿ ಮನೋರಮಾ ಮಾಧ್ವರಾಜ್ (ಉಡುಪಿ) —ಮಾನ್ಯ ಅಧ್ಯಕ್ಷರೇ, ಮಂತ್ರಿಮಹೋದಯರು, ಶಿಕ್ಷಣ ತಜ್ಞರು ಮಣಿಪಾಲ ಉಡುಪಿಗೆ ಬಂದಾಗಲೆಲ್ಲ ಹೇಳುತ್ತಿರುತ್ತಾರೆ ಅನೇಕ ವರ್ಷಗಳಿಂದ ''ಉಡುಪಿ ಶೈಕ್ಷಣಿಕವಾಗಿ ಹಿಂದುಳಿದಿದೆ. ಇನ್ನೂ ಮುಂದುವರಿಯಲಿ'' ನಿಜವಾಗಿ ಮುಂದುವರಿಯಬೇಕಾದರೆ, ಬಡ ಹಾಗೂ ಮಧ್ಯಮ ವರ್ಗದವರಿಗೆ ಸಾಕಷ್ಟು ಶೈಕ್ಷಣಿಕ ಅವಕಾಶ ಬೇಕು. ಆ ವರ್ಗದ ಕೈಗೆ ಅತ್ಯಂತ ಕಷ್ಟವಾಗಿ ಎಟುಕುವ ವಿದ್ಯೆ ಎಂದರೆ ಕಲೆ, ವಿಜ್ಞಾನ, ವಾಣಿಜ್ಯ ಪದವಿಗಳು. ಈ ಪದವಿ ಕಾಲೇಜುಗಳು ಉಡುಪಿಯಲ್ಲಿ ಎಷ್ಟಿದ್ದರೂ ವಿದ್ಯಾರ್ಥಿಗಳ ಬೇಡಿಕೆಗೆ ಸರಿಯಾಗಿ ಸ್ಥಳಾವಕಾಶವಿಲ್ಲ, ಹದಿನೆಂಟು ಹೈಸ್ಕೂಲುಗಳು, ಐದಾರು ಜೂನಿಯರ್ ಕಾಲೇಜುಗಳು ಇರುವ ಉಡುಪಿ ಕ್ಷೇತ್ರಕ್ಕೆ ಒಂದು ಸರ್ಕಾರಿ ಪ್ರಥಮದರ್ಜೆ ಕಾಲೇಜು ಬೇಕೆಂಬ ಬೇಡಿಕೆಯನ್ನು ಈ ಹಿಂದೆಯೇ ಸರಕಾರದ ಮುಂದಿರಿಸಿದ್ದರೂ ಕಾರ್ಯಗತವಾಗಿಲ್ಲ. ಇದರಿಂದ ಅವಕಾಶ ವಂಚಿತರಾದ ಹಿಂದುಳಿದವರು, ಬಡವರಿಗೆ, ಮಧ್ಯಮ ವರ್ಗದವರಿಗೆ ಅನ್ಯಾಯವಾಗುತ್ತಿದೆ, ಆದ್ದರಿಂದ ಈ ಶೈಕ್ಷಣಿಕ ವರ್ಷದಲ್ಲೇ ಉಡುಪಿಯಲ್ಲಿ ಒಂದು ಸರಕಾರಿ ಪ್ರಥಮದರ್ಜೆ ಕಾಲೇಜು ತೆರೆಯಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಉನ್ನತ ಶಿಕ್ಷಣ ಸಚಿವರ ಪರವಾಗಿ ಈ ಉತ್ತರವನ್ನು ಕೊಡಲಿಚ್ಛಿಸುತ್ತೇನೆ.

ಉಡುಪಿಯಲ್ಲಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವ ಬಗ್ಗೆ ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರು ೭–೧೦-೮೭ರಲ್ಲಿ ಪ್ರಸ್ತಾವನೆಯನ್ನು ಶಿಫಾರಸು ಮಾಡಿ ಸರ್ಕಾರಕ್ಕೆ ಕಳುಹಿಸುತ್ತಾರೆ. ಕಾರ್ಣಾಂತರಗಳಿಂದ ೧೯೮೭-೮೮ರಲ್ಲಿ ಮಂಜೂರಾದ ಕಾಲೇಜುಗಳಲ್ಲಿ ಇದನ್ನು ಸೇರಿಸಲಾಗಿಲ್ಲ.

೧೯೮೮-೮೯ರ ಸಾಲಿನಲ್ಲಿ ಪ್ರಥಮ ದರ್ಜೆ ಕಾಲೇಜುಗಳನ್ನು ಇನ್ನೂ ಮಂಜೂರು ಮಾಡಿಲ್ಲ. ವಿಶ್ವವಿದ್ಯಾನಿಲಯದ ಸಂಯೋಜನೆಗೆ ಅರ್ಜಿ ಸಲ್ಲಿಸಲು ಈಗಾಗಲೇ ಸಾಕಷ್ಟು ವಿಳಂಬವಾಗಿದೆ. ಆದಕಾರಣ ಈ ವರ್ಷ ಇದನ್ನು ಪರಿಶೀಲಿಸಲು ಸಾಧ್ಯವಾಗಲಾರದು. ೧೯೮೯-೯೦ರ ಸಾಲಿನಲ್ಲಿ ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಮಂಜೂರಾತಿ ನೀಡುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.